(ಇಂದು ದಿನಾಂಕ 24-03-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಪ್ರತಿವಾದಿಗಳ ಪರ ಶ್ರೀ ಡಿ.ಎಸ್.ಭಟ್ಟ ವಕೀಲರಿಂದ-**

ನನ್ನ ತಂದೆ ಅನಂತ ನಾಯ್ಕರವರಿಗೆ ಒಟ್ಟು 3 ಜನ ಮಕ್ಕಳಿದ್ದು, ಅವರ ಪೈಕಿ ಇಬ್ಬರು ಗಂಡು ಮತ್ತು ಒಂದು ಹೆಣ್ಣು ಆಗಿರುತ್ತಾರೆ. ನನ್ನ ಸಹೋದರಿಯ ಹೆಸರು ನಾಗವೇಣಿ ಕೋಂ ನೀಲಕಂಠ ನಾಯ್ಕ ಎಂಬುದಾಗಿರುತ್ತದೆ. ನನ್ನ ಸಹೋದರಿಯ ಗಂಡ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆಯವರ ಕಾಲಾನಂತರ ಸ್ವತ್ತುಗಳ ಖಾತೆಯನ್ನು ವಾರಿಸಾ ಮೂಲಕ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಕಂದಾಯ ದಾಖಲಾತಿಗಳಲ್ಲಿ ನನ್ನ ಸಹೋದರಿಯ ಹೆಸರನ್ನು ನಮೂದಿಸಲಾಗಿರುವುದಿಲ್ಲ. ದಾವಾ 1 ರಿಂದ 3 ನೇ ಐಟಂ ಸ್ವತ್ತುಗಳು ನನ್ನ ತಂದೆಯವರಿಗೆ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ಭೂನ್ಯಾಯಮಂಡಳಿಯಿಂದ ಮಂಜೂರಿ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಯಮರಿಗೆ ವಾಮನ ಎಂಬ ಸಹೋದರನಿದ್ದು, ಅವರು ಮೃತಪಟ್ಟಿದ್ದು, ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ತಾಯಿ ಗೋದಾವರಿ ಹಾಲಿ ಜೀವಂತ ಇದ್ದಾರೆ.

ದಾವಾ 1 ರಿಂದ 3 ನೇ ಐಟಂ ಸ್ವತ್ತುಗಳ ಪಹಣಿಪತ್ರಿಕೆಯಲ್ಲಿ ನನ್ನ ಹಾಗೂ ನನ್ನ ಸಹೋದರನ ಹೆಸರಿನೊಂದಿಗೆ ವಾಮನರವರ ಇಬ್ಬರು ಮಕ್ಕಳ ಹೆಸರನ್ನೂ ಸಹ ಜಂಟಿಯಾಗಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ದಾವಾ 1 ರಿಂದ 3 ನೇ ಐಟಂ ಸ್ವತ್ತುವಿನಲ್ಲಿ ನನ್ನ ಹಾಗೂ ನನ್ನ ಚಿಕ್ಕಪ್ಪನ ಮನೆ ಇದ್ದು, ನನ್ನ ಮನೆ ಯಾವ ಸರ್ವೆ ನಂಬರನಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ. ನನ್ನ ಚಿಕ್ಕಪ್ಪನ ಮನೆ ಯಾವ ಸರ್ವೆ ನಂಬರನಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತುಗಳ ಸರ್ವೆ ಮಾಡಿಸಿರುವುದಿಲ್ಲ. ನನ್ನ ಚಿಕ್ಕಪ್ಪನ ಮನೆಯ ಸಂಖ್ಯೆ.ಹೇಳಲು ಬರುವುದಿಲ್ಲ. ನನ್ನ

ಮತ್ತು ನನ್ನ ಚಿಕ್ಕಪ್ಪನ ಮನೆ ದಕ್ಷಿಣಾಭಿಮುಖವಾಗಿದೆ. ನನ್ನ ವಾಸ್ತವ್ಯದ ಮನೆಯು ಪುರಸಭಾ ದಾಖಲಾತಿಗಳಲ್ಲಿ ನನ್ನ ಮತ್ತು ನನ್ನ ಸಹೋದರರನ ಹೆಸರಿನಲ್ಲಿ ಇದೆ.

ನಾನು ಸುಮಾರು 29 ವರ್ಷಗಳಿಂದ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಕುಮಟಾ ತಾಲೂಕನ್ನು ಹೊರತುಪಡಿಸಿ ಸಿದ್ದಾಪುರದಲ್ಲಿ ಸುಮಾರು 5 ವರ್ಷಗಳವರೆಗೆ ಶಿಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ. ನನ್ನ ಸಹೋದರ ಕುಮಟಾದ Diet ಕಾಲೇಜಿನಲ್ಲಿ ಮುಖ್ಯೋಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನನ್ನ ಸಹೋದರ ಹಳೆ ಹೆರವಟ್ಟಾದಲ್ಲಿ ಮನೆಯನ್ನು ನಿರ್ಮಿಸಿಕೊಂಡು ಸುಮಾರು 8 ರಿಂದ 10 ವರ್ಷಗಳಿಂದ ಕುಟುಂಬದವರೊಂದಿಗೆ ಅಲ್ಲಿಯೇ ವಾಸ್ತವ್ಯ ಮಾಡುತ್ತಿದ್ದಾರೆ. ಸಾಕ್ಷಿಯು ಮುಂದುವರಿದು ದಿನನಿತ್ಯ ನಮ್ಮ ಮನೆಯ ಬಳಿ ಬಂದು ಹೋಗುತ್ತಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನ ಮಕ್ಕಳನ್ನು ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಚಿಕ್ಕಪ್ಪನ ಮಕ್ಕಳ ಗಮನಕ್ಕೆ ತರದೇ ಪ್ರಸ್ತುತ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರೊಂದಿಗೆ ಚರ್ಚೆ ಮಾಡಿದ ನಂತರವೇ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನ ಮಕ್ಕಳು ಅವರನ್ನು ಪ್ರತಿನಿಧಿಸಲು ಯಾವುದೇ ಮೊಕ್ತ್ಯಾರುನಾಮೆಯನ್ನು ಬರೆದುಕೊಟ್ಟಿರುವುದಿಲ್ಲ.

ದಾವಾ 4 ನೇ ಐಟಂ ಸ್ವತ್ತು ನಮ್ಮ ಮನೆಯ ದಕ್ಷಿಣ ದಿಕ್ಕಿನ ಎದುರುಭಾಗದಲ್ಲಿ ಅಂದರೆ ದಾವಾ 3 ನೇ ಐಟಂ ಸ್ವತ್ತಿನ ದಕ್ಷಿಣ ದಿಕ್ಕಿಗೆ ಇದೆ. ದಾವಾ 5 ನೇ ಐಟಂ ಸ್ವತ್ತು ಪ್ರತಿವಾದಿಗಳ ಮನೆಯ ಹಿಂಭಾಗಕ್ಕೆ ಅಂದರೆ ದಾವಾ 4 ನೇ ಐಟಂ ಸ್ವತ್ತಿನ ದಕ್ಷಿಣಕ್ಕೆ ಇದೆ. ವಾದ ಪತ್ರದೊಂದಿಗೆ ಹಾಜರುಪಡಿಸಲಾದ ಹಾತ್ ನಕಾಶೆಯನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಹಾಜರುಪಡಿಸಿರುವ ಹಾತ್ ನಕಾಶೆಯು ಸ್ಥಳೀಯ ವಸ್ತುಸ್ಥಿತಿಯಂತೆ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ